# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 737 |
| ಸದಸ್ಯರ ಹೆಸರು: | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 21.02.2024 |
| ಉತ್ತರಿಸುವ ಸಚಿವರು: | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಲೋಕೋಪಯೋಗಿ ಇಲಾಖೆಯು ದಿನಾಂಕ: 30.06.2022 ರ ಮೂಲಕ ಎನ್.ಹೆಚ್. ಎಸ್.ಎಚ್. ಮತ್ತು ಎಂ.ಡಿ.ಆರ್. ರಸ್ತೆಗಳ ಅಕ್ಕಪಕ್ಕಗಳಲ್ಲಿ ರಸ್ತೆ ಮಧ್ಯದಿಂದ ಕ್ರಮವಾಗಿ 40 ಮೀಟರ್, 40 ಮೀಟರ್ ಹಾಗೂ 25 ಮೀಟರ್ ಅಂತರದೊಳಗೆ ಕಟ್ಟಡ ಕಟ್ಟಲು ಅನುಮತಿ ನೀಡದಂತೆ ಮತ್ತು ವ್ಯವಹಾರ ನಡೆಸುವುದಕ್ಕೆ ಅನುಮತಿಯನ್ನು ನೀಡಬಾರದೆಂಬ ನಿಯಮಗಳೂ ಇದ್ದು, ಇದು ಇನ್ನು ಕಟ್ಟುವ ಕಟ್ಟಡಗಳಿಗೆ ಮತ್ತು ಪ್ರಾರಂಭಿಸುವ ವ್ಯವಹಾರಗಳಿಗೆ ಮಾತ್ರ ಅನ್ವಯಿಸುತ್ತದೆಯೇ: ಈಗಾಗಲೇ ಇರುವ ಕಟ್ಟಡಗಳಿಗೆ ಈ ನಿಯಮ ಅನ್ವಯಿಸುತ್ತವೆಯೇ: ಈ ನಿಯಮಗಳ ಪಾಲನೆಯ ಮೇಲ್ವಿಚಾರಣಾ ಪ್ರಾಧಿಕಾರ ಯಾವುದು (ವಿವರ ನೀಡುವುದು) | ಲೋಕೋಪಯೋಗಿ ಇಲಾಖೆಯ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಹೆದ್ದಾರಿಗಳ ಇಕ್ಕೆಲಗಳಲ್ಲಿ ಕಟ್ಟಡಗಳ ನಿಯಂತ್ರಣ ರೇಖೆಗಳನ್ನು ನಿಗದಿಪಡಿಸುವ ಕುರಿತು ಈ ಕೆಳಕಂಡ ಸರ್ಕಾರದ ಆದೇಶಗಳಲ್ಲಿ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ.<br>1. ಸರ್ಕಾರದ ಆದೇಶ ಸಂಖ್ಯೆ:PWD 362 CRM 98 dated:09.10.1998<br>2. ಸರ್ಕಾರದ ಆದೇಶ ಸಂಖ್ಯೆ:PWD 44 CRM 99 dated:16.11.2002<br>3. ಸರ್ಕಾರದ ಆದೇಶ ಸಂಖ್ಯೆ:PWD 23 RDF 2024 dated:18.10.2004<br><br>ಅದರಂತೆ ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ರಸ್ತೆಯ ಮಧ್ಯ ಭಾಗದಿಂದ 40 ಮೀಟರ್ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಇಕ್ಕೆಲಗಳಲ್ಲಿ 25 ಮೀಟರ್ ಅಂತರಕ್ಕೆ ಕಟ್ಟಡ ರೇಖೆಯನ್ನು ನಿಗದಿಪಡಿಸಲಾಗಿರುತ್ತದೆ. ಹಾಗೂ ರಾಜ್ಯ ಹೆದ್ದಾರಿಗೆ ಸಂಬಂಧಪಟ್ಟಂತೆ ಕಾರ್ಪೋರೇಷನ್ ಪರಿಮಿತಿ, ಸಿಟಿಮುನ್ಸಿಪಲ್ ಕೌನ್ಸಿಲ್ ಪರಿಮಿತಿ, ಟೌನ್ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ, ಟೌನ್ ಪಂಚಾಯಿತಿ ಪರಿಮಿತಿ, ಗ್ರಾಮಪಂಚಾಯಿತಿ ಪರಿಮಿತಿಯಲ್ಲಿ ರಸ್ತೆಯ ಭೂಗಡಿಯಿಂದ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಲಾಗುತ್ತದೆ.<br><br>ಮೇಲ್ಕಂಡ ಆದೇಶಗಳ ಕುರಿತು ಪುನಃ ಸರ್ಕಾರದ ಪತ್ರ ಸಂಖ್ಯೆ:ಲೋಇ 466 ಸಿಆರ್ಎಂ 2022(ಇ), ದಿನಾಂಕ:30.06.2022 ರಲ್ಲಿ ವಿವರವಾಗಿ ಸ್ಪಷ್ಟನೆಯನ್ನು ನೀಡಲಾಗಿರುತ್ತದೆ.<br><br>ಸಂಬಂಧಿಸಿದ ವಿಭಾಗದ ಕಾರ್ಯಪಾಲಕ ಅಭಿಯಂತರರು ರಸ್ತೆಗಳ ಗಡಿ ಹಾಗೂ ಕಟ್ಟಡಗಳ ರೇಖೆಗಳನ್ನು ಗುರುತಿಸುವ / ಮೇಲ್ವಿಚಾರಣೆ ಮಾಡುವ ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.<br><br>ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ಕಟ್ಟಡ ನಿಯಂತ್ರಣ ರೇಖೆಯನ್ನು IRC 73–1980– (ಕಂಡಿಕೆ 6.1.5), ಕೇಂದ್ರ ಭೂಸಾರಿಗೆ ಮಂತ್ರಾಲಯದ ಸುತ್ತೋಲೆ ಸಂ: NH.111/P/72/76 ದಿನಾಂಕ: 13.01.1977, ರಾಜ್ಯ ಸರ್ಕಾರ ಸುತ್ತೋಲೆ ದಿನಾಂಕ:30.06.2022 ರನ್ವಯ ಓಪನ್ ಏರಿಯಾದಲ್ಲಿ ಹೆದ್ದಾರಿಯ ಮಧ್ಯಭಾಗದಿಂದ 40.00 ಮೀಟರ್ ಅಂತರದಲ್ಲಿ ಹಾಗೂ ಬಿಲ್ಟ್–ಅಪ್ ಏರಿಯಾದಲ್ಲಿ ಹೆದ್ದಾರಿ ಗಡಿ ಭಾಗದಿಂದ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | 3.00 ರಿಂದ 6.00 ಮೀಟರ್ ಕಟ್ಟಡದ ಅಂತರ ನಿಗಧಿಪಡಿಸಲಾಗುತ್ತದೆ ಅಲ್ಲದೇ, ಕೇಂದ್ರ ಭೂಸಾರಿಗೆ ಮಂತ್ರಾಲಯ ಮತ್ತು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ / ಮಾರ್ಗಸೂಚಿಗಳನ್ನು ಪರಿಗಣಿಸಿ ಕಟ್ಟಡದ ಅಂತರದ ಗಡಿ ರೇಖೆಯನ್ನು ನಿಗಧಿಪಡಿಸಲಾಗುವುದು.<br><br>ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ದಿನಾಂಕ: 13.07.2016ರ ಸುತ್ತೋಲೆಯಂತೆ ರಾಜ್ಯದಲ್ಲಿನ ರಾಷ್ಟ್ರೀಯ ಹೆದ್ದಾರಿಗಳ ಮೇಲ್ವಿಚಾರಣಾ ಪ್ರಾಧಿಕಾರವು ಪ್ರಾದೇಶಿಕ ಅಧಿಕಾರಿಗಳು ಕೇಂದ್ರ ಭೂಸಾರಿಗೆ ಮಂತ್ರಾಲಯ, ಬೆಂಗಳೂರು ರವರು ಇರುತ್ತಾರೆ.<br><br>ರಸ್ತೆಗಳು ಮೇಲ್ದರ್ಜೆಗೊಂಡು ಆಯಾ ವರ್ಗಕ್ಕೆ ಹೆದ್ದಾರಿಗಳು ಘೋಷಣೆಯಾದಂತೆ ನಿಗದಿಪಡಿಸಿರುವ ಕಟ್ಟಡ ನಿಯಂತ್ರಣ ರೇಖೆಗಳ ಮಿತಿಯೊಳಗೆ ಯಾವುದೇ ನಿರ್ಮಾಣಕ್ಕೆ ಅವಕಾಶವಿರುವುದಿಲ್ಲ. ಈಗಾಗಲೇ ನಿರ್ಮಾಣಗೊಂಡಿರುವ ಕಟ್ಟಡಗಳಿದ್ದಲ್ಲಿ ಹೆದ್ದಾರಿಗಳ ಅಗಲೀಕರಣದ ಸಂದರ್ಭದಲ್ಲಿ ನಿಯಮಾನುಸಾರ ತೆರವುಗೊಳಿಸಲು ಕ್ರಮವಹಿಸಲಾಗುತ್ತದೆ. |
| ಆ) | ಈಗಾಗಲೇ ಈ ಮೇಲಿನ ವಿವಿಧ ರಸ್ತೆ ಅಂಚಿನ ವ್ಯಾಪ್ತಿಯೊಳಗೆ ಕಟ್ಟಡ / ಅಂಗಡಿ / ವ್ಯವಹಾರಗಳಿರುವ ಪ್ರಕರಣಗಳಲ್ಲಿ ಸದರಿ ರಸ್ತೆಗಳನ್ನು ಅಗಲೀಕರಣ / ಚತುಷ್ಪಥ ಮಾಡುವಾಗ ಸದರಿ ಕಟ್ಟಡ / ಅಂಗಡಿ / ವ್ಯವಹಾರಗಳನ್ನು ಮುಂದುವರೆಸಲು ಅವಕಾಶವಿದೆಯೇ; ಅಂತಹ ಸಂದರ್ಭದಲ್ಲಿ ಇರುವ ಕಟ್ಟಡದ ಪೂರ್ಣ ಪರಿಹಾರವನ್ನು ಪಡೆದಿದ್ದರೂ ಕಟ್ಟಡಗಳನ್ನು ರಸ್ತೆ ಮಾಡಲು ಉಪಯೋಗಿಸಿದ ಜಾಗದಲ್ಲಿ ಮಾತ್ರ ವಿಭಜಿಸಿ ತೆರವುಗೊಳಿಸಿ ಉಳಿದ ಕಟ್ಟಡದ ಭಾಗವನ್ನು ದುರಸ್ಥಿ ಮಾಡಿ ಅಥವಾ ಕಟ್ಟಡವನ್ನು ಸ್ಥಳಾಂತರಿಸಿ ರಸ್ತೆ ಅಂಚಿನ ವ್ಯಾಪ್ತಿಯೊಳಗೆ ಮುಂದುವರಿಸಲು ಅವಕಾಶವಿದೆಯೇ; (ವಿವರ ನೀಡುವುದು) | ರಸ್ತೆಗಳನ್ನು ಅಗಲೀಕರಣ/ಚತುಷ್ಪಥ ರಸ್ತೆಗಳನ್ನಾಗಿ ಅಭಿವೃದ್ಧಿ ಪಡಿಸುವಾಗ ಕಟ್ಟಡ ನಿಯಂತ್ರಣ ರೇಖೆಯೊಳಗೆ ನಿಯಮಾನುಸಾರ ಪರಿಹಾರ ನೀಡಿ ಭೂಸ್ವಾಧೀನ ಪಡಿಸಿಕೊಂಡು ಅಭಿವೃದ್ಧಿ ಪಡಿಸಲಾಗುವುದು. ನಂತರದಲ್ಲಿಯೂ ಸಹ ಈ ನಿಯಂತ್ರಣ ರೇಖೆಯೊಳಗೆ ರಸ್ತೆಯ ಇಕ್ಕೆಲಗಳಲ್ಲಿ ಯಾವುದೇ ಅನಧಿಕೃತ ಕಟ್ಟಡ ಅಂಗಡಿ ಮುಂಗಟ್ಟುಗಳಿಗೆ ಅವಕಾಶವಿರುವುದಿಲ್ಲ. ಹಾಗೂ ಕಟ್ಟಡದ ಪೂರ್ಣ ಪರಿಹಾರವನ್ನು ಪಡೆದಿದ್ದರೂ ಕಟ್ಟಡಗಳನ್ನು ರಸ್ತೆ ಮಾಡಲು ಉಪಯೋಗಿಸಿದ ಜಾಗದಲ್ಲಿ ಮಾತ್ರ ವಿಭಜಿಸಿ, ತೆರವುಗೊಳಿಸಿ ಉಳಿದ ಕಟ್ಟಡದ ಭಾಗವನ್ನು ದುರಸ್ತಿಮಾಡಿ ಅಥವಾ ಕಟ್ಟಡವನ್ನು ಸ್ಥಳಾಂತರಿಸಿ, ರಸ್ತೆ ಅಂಚಿನ ವ್ಯಾಪ್ತಿಯೊಳಗೆ ಮುಂದುವರೆಸಲು ಅವಕಾಶವಿರುವುದಿಲ್ಲ.<br><br>ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ / ಅಗಲೀಕರಣ ಮಾಡುವ ಸಂದರ್ಭದಲ್ಲಿ IRC 73-1980- (ಕಂಡಿಕೆ 6.1.5), ಕೇಂದ್ರ ಭೂಸಾರಿಗೆ ಮಂತ್ರಾಲಯದ ಸುತ್ತೋಲೆ ಸಂ: NH.111/P/72/76 ದಿನಾಂಕ: 13.01.1977, ರಾಜ್ಯ ಸರ್ಕಾರ ಸುತ್ತೋಲೆ ದಿನಾಂಕ:30.06.2022 ರನ್ವಯ ಸದರಿ ಹೆದ್ದಾರಿಗಳ ಗಡಿರೇಖೆಯನ್ನು ನಿಗದಿಪಡಿಸಲಾಗುತ್ತದೆ. ಈ ಸಂದರ್ಭದಲ್ಲಿ ಹೆದ್ದಾರಿಗಳ ಗಡಿ ರೇಖೆಯೊಳಗೆ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ಯಾವುದೇ ಪರಿಹಾರ ನೀಡದೆ ತೆರವುಗೊಳಿಸಲಾಗುತ್ತದೆ ಹಾಗೂ ಅಗಲೀಕರಣಕ್ಕಾಗಿ ಖಾಸಗಿ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡಿದ್ದಲ್ಲಿ ಸದರಿ ಕಟ್ಟಡಗಳಿಗೆ NH LA Act 1956 RFCT LARR 2013 ರನ್ವಯ ಪರಿಹಾರವನ್ನು ನೀಡಿ ತೆರವುಗೊಳಿಸಲಾಗುವುದು. |

| ಪ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಎನ್.ಹೆಚ್. ಮತ್ತು ಎಸ್.ಎಚ್. ರಸ್ತೆಗಳನ್ನು ಅಗಲೀಕರಣ / ಚತುಷ್ಪಥ ಮಾಡುವಾಗ ರಸ್ತೆ ಅಂಚಿನ ಗಡಿಯನ್ನು ಗುರುತಿಸಲು ಮುಖ್ಯ ರಸ್ತೆಯ ಮಧ್ಯ ಬಿಂದುವನ್ನು ಪರಿಗಣಿಸಲಾಗುತ್ತದೆಯೇ ಅಥವಾ ಸೇವಾ ರಸ್ತೆಯ (ಸರ್ವಿಸ್ ರೋಡ್) ಮಧ್ಯ ಬಿಂದುವನ್ನು ಪರಿಗಣಿಸಲಾಗುತ್ತದೆಯೇ; (ಸುತ್ತೋಲೆ ಸಹಿತ ವಿವರ ನೀಡುವುದು) | ಸರ್ಕಾರದ ಆದೇಶ ದಿನಾಂಕ:18.10.2004 ರನ್ವಯ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ರಸ್ತೆಗಳಲ್ಲಿ ಕಟ್ಟಡ ನಿಯಂತ್ರಣ ಗಡಿಯನ್ನು ರಸ್ತೆಯ ಮಧ್ಯಭಾಗದಿಂದ ಇಕ್ಕೆಲಗಳಲ್ಲಿ ಪರಿಗಣಿಸಲಾಗುತ್ತದೆ. ಹಾಗೂ ರಾಜ್ಯ ಹೆದ್ದಾರಿಗೆ ಸಂಬಂಧಪಟ್ಟಂತೆ ಕಾರ್ಪೋರೇಷನ್ ಪರಿಮಿತಿ, ಸಿಟಿಮುನ್ಸಿಪಲ್ ಕೌನ್ಸಿಲ್ ಪರಿಮಿತಿ, ಟೌನ್ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ, ಟೌನ್ ಪಂಚಾಯಿತಿ ಪರಿಮಿತಿ, ಗ್ರಾಮಪಂಚಾಯಿತಿ ಪರಿಮಿತಿಯಲ್ಲಿ ರಸ್ತೆಯ ಭೂಗಡಿಯಿಂದ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸಲಾಗುತ್ತದೆ.<br><br>ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು IRC 73-1980- (ಕಂಡಿಕೆ 6.1.5), ಕೇಂದ್ರ ಭೂಸಾರಿಗೆ ಮಂತ್ರಾಲಯದ ಸುತ್ತೋಲೆ ಸಂ: NH.111/P/72/76 ದಿನಾಂಕ: 13.01.1977, ರಾಜ್ಯ ಸರ್ಕಾರ ಸುತ್ತೋಲೆ ದಿನಾಂಕ:30.06.2022 ರನ್ವಯ ಓಪನ್ ಏರಿಯಾದಲ್ಲಿ ಹೆದ್ದಾರಿಯ ಮಧ್ಯಭಾಗದಿಂದ 40.00 ಮೀಟರ್ ಅಂತರದಲ್ಲಿ ಹಾಗೂ ಬಿಲ್ಟ್-ಅಪ್ ಏರಿಯಾದಲ್ಲಿ ಹೆದ್ದಾರಿ ಗಡಿ ಭಾಗದಿಂದ 3.00 ರಿಂದ 6.00 ಮೀಟರ್ ಕಟ್ಟಡದ ಅಂತರ ನಿಗಧಿಪಡಿಸಲಾಗುತ್ತದೆ ಅಲ್ಲದೇ, ಕೇಂದ್ರ ಭೂಸಾರಿಗೆ ಮಂತ್ರಾಲಯ ಮತ್ತು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ / ಮಾರ್ಗಸೂಚಿಗಳನ್ನು ಪರಿಗಣಿಸಿ ಕಟ್ಟಡದ ಅಂತರದ ಗಡಿ ರೇಖೆಯನ್ನು ನಿಗಧಿಪಡಿಸಲಾಗುವುದು. |
| ಈ) | ಭೂಸ್ವಾಧೀನ ವ್ಯಾಪ್ತಿಗೆ ಒಳಪಡದ ರಸ್ತೆ ಮಧ್ಯದಿಂದ 40 ಮೀಟರ್ ಅಂತರದೊಳಗೆ ದಾಖಲಿತ ರಸ್ತೆಗೆ ಭೂಗಡಿಯ ಅಂಚಿನಿಂದ 6 ಮೀಟರ್ ಅಂತರದಲ್ಲಿ ಕಟ್ಟಡ ಕಟ್ಟುವ ಷರತ್ತಿಗೊಳಪಟ್ಟು ನಿರಾಕ್ಷೇಪಣಾ ಪತ್ರ ನೀಡುತ್ತಿದ್ದು, ಮುಂದೆ ರಸ್ತೆಗೆ ಜಾಗ ವಶಪಡಿಸುವ ಸಂದರ್ಭದಲ್ಲಿ ಯಾವುದೇ ಪರಿಹಾರವಿಲ್ಲದೆ ಸ್ಥಳವನ್ನು ಇಲಾಖೆಗೆ ಉಚಿತವಾಗಿ ನೀಡುವ ಮುಚ್ಚಳಿಕೆಯನ್ನು ಪಡೆದುಕೊಳ್ಳಲಾಗುತ್ತಿದ್ದು, ಈ ರೀತಿ ಮುಚ್ಚಳಿಕೆ ಪಡೆದುಕೊಳ್ಳಲು ನಿಯಮಗಳಲ್ಲಿ ಅವಕಾಶವಿದೆಯೇ; | ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಿಗೆ ಸಂಬಂಧಿಸಿದಂತೆ ಯಾವುದೇ ಮುಚ್ಚಳಿಕೆ ಪಡೆದುಕೊಳ್ಳಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ / ಅಗಲೀಕರಣ ಮಾಡುವ ಸಂದರ್ಭದಲ್ಲಿ IRC 73-1980- (ಕಂಡಿಕೆ 6.1.5), ಕೇಂದ್ರ ಭೂಸಾರಿಗೆ ಮಂತ್ರಾಲಯದ ಸುತ್ತೋಲೆ ಸಂ: NH.111/P/72/76 ದಿನಾಂಕ: 13.01.1977, ರಾಜ್ಯ ಸರ್ಕಾರ ಸುತ್ತೋಲೆ ದಿನಾಂಕ:30.06.2022 ರನ್ವಯ ಸದರಿ ಹೆದ್ದಾರಿಗಳ ಗಡಿರೇಖೆಯನ್ನು ನಿಗಧಿಪಡಿಸಲಾಗುತ್ತದೆ. ಈ ಸಂದರ್ಭದಲ್ಲಿ ಹೆದ್ದಾರಿಗಳ ಗಡಿ ರೇಖೆಯೊಳಗೆ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ಯಾವುದೇ ಪರಿಹಾರ ನೀಡದೆ ತೆರವುಗೊಳಿಸಲಾಗುತ್ತದೆ ಹಾಗೂ ಅಗಲೀಕರಣಕ್ಕಾಗಿ ಖಾಸಗಿ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡಿದ್ದಲ್ಲಿ ಸದರಿ ಕಟ್ಟಡಗಳಿಗೆ NH LA Act 1956 RFCT LARR 2013 ರನ್ವಯ ಪರಿಹಾರವನ್ನು ನೀಡಿ ತೆರವುಗೊಳಿಸಲಾಗುವುದು. |

ಲೋಇ 13 ಸಿಕ್ಯೂಎನ್ 2024(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು